ಪ್ರಜಾವಾಣಿ

# ಇಂದಿನಿಂದ ಅಂತರರಾಷ್ಟ್ರೀಯ ವಿಚಾರಸಂಕಿರಣ

ಬೆಂಗಳೂರು: 'ದಿ ಮಿಥಿಕ್ ಸೊಸೈಟಿ ಮತ್ತು ಜೈನ್ ವಿಶ್ವವಿದ್ಯಾಲಯ ಸಂಸ್ಥೆಗಳು ಸಂಯುಕ್ತವಾಗಿ ಸ್ವಾಮಿ ವಿವೇಕಾನಂದರ 150ನೇ ಜನ್ಮದಿನಾಚರಣೆಯ ಅಂಗವಾಗಿ ಇದೇ 22 ರಿಂದ 24ರ ವರೆಗೆ 'ನಾಗರೀಕತೆಯ ಭವಿಷ್ಯ' ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿವೆ' ಎಂದು ಜೈನ್ ವಿಶ್ವವಿದ್ಯಾಲಯದ ಸಹ ಕುಲಪತಿ ಡಾ.ಸಂದೀಪ್ ಶಾಸ್ತ್ರಿ ಅವರು ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಸಂಕಿರಣದಲ್ಲಿ ಪರಿಸರ, ಶಕ್ತಿ, ಆರೋಗ್ಯ, ಜನಸಂಖ್ಯಾ ಬದಲಾವಣೆ, ಜಾಗತೀಕರಣದ ಸಮಸ್ಯೆಗಳು ಮತ್ತಿತರರ ವಿಷಯಗಳ ಕುರಿತು ಚರ್ಚೆ ನಡೆಸಲಾಗುವುದು' ಎಂದರು.

'ವಿದೇಶಿ ವಿದ್ವಾಂಸರಾದ ಉಕ್ರೇನ್‌ನ ಜಾರ್ಜ್ ಶುಲ್‌ಮನ್, ಯೂರಿ ಟಿಕರೇವ್, ರಷ್ಯಾದ ಲಬೋವ್ ಕುರಿಲೋ ಮತ್ತಿತರರು ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ' ಎಂದರು.

ಪ್ರಾಧ್ಯಾಪಕ ಡಾ.ಬಿ.ವಿ.ಸುಬ್ಬರಾಯಪ್ಪ, ಮಾಸ್ಕೋದ ಲೆಬೆಡೇವ್ ಆಸ್ಟ್ರೋ-ಸ್ಪೇಸ್ ಸಂಸ್ಥೆಯ ಮುಖ್ಯಸ್ಥ ಪ್ರೊ.ವ್ಲಾಡಿಮಿರ್ ಬುರ್ದ್ಯೂಜ್ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದರು.